# ಕೃಷಿ ವಿಕಾಸ ಯೋಜನೆಯಡಿ ರೈತ ಉತ್ಪಾದಕ ಕಂಪನಿ ನೆರವು

**ಸಂ.ಕ.ಸಮಾಚಾರ ನಂದಗುಡಿ**

ರೈತರ ಗುಂಪುಗಳನ್ನು ರಚಿಸಿ ಕೃಷಿ ವಿಕಾಸ ಯೋಜನೆ ನೆರವು ಪಡೆಯಲು ಯತ್ನಿಸಲಾಗುತ್ತಿದೆ. ರೈತರ ಕಂಪನಿಯ ಮೂಲಕ ನಷ್ಟದ ಸನ್ನಿವೇಶದಲ್ಲಿ ಕೈ ಹಿಡಿಯಲು ನಿರ್ಧರಿಸಲಾಗಿದೆ. ಸಂಸ್ಥೆಯ ಉದ್ದೇಶ ಮತ್ತು-ಪ್ರಯೋಜನಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಜಿಲ್ಲಾ ರೇಷ್ಮೆ ಉಪ ನಿರ್ದೇಶಕ ಎಂ. ಲಕ್ಷ್ಮಣ್ ತಿಳಿಸಿದರು.

ಶ್ರೀಕಾಡುಮಲ್ಲೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ನಡೆದ ಹೊಸಕೋಟೆ ಅಮೃತ ರೇಷ್ಮೆ ರೈತ ಉತ್ಪಾದಕರ ಕಂಪನಿಯ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು.

ರೇಷ್ಮೆ ಕೃಷಿಯನ್ನು ಉಳಿಸಿ ಬೆಳೆಸಲು, ನಷ್ಟಕ್ಕೆ ಈಡಾಗುವುದನ್ನು ತಪ್ಪಿಸಲು ಸರಕಾರದ ಯೋಜನೆ ಬಳಸಿಕೊಳ್ಳಲಾಗುತ್ತಿದೆ. ಅಂತರ್ಜಲ ಕುಸಿತ, ಕೂಲಿಕಾರರ ಸಮಸ್ಯೆ, ವಿದ್ಯುತ್ ಅಭಾವ ಸೇರಿದಂತೆ ಇತರೆ ಸಮಸ್ಯೆಗಳಿಂದ ರೇಷ್ಮೆ ಕೃಷಿಯಿಂದ ವಿಮುಖರಾಗುತ್ತಿದ್ದ ರೈತರನ್ನು ಸಂಘಟಿಸಿ ಪ್ರೋತ್ಸಾಹಿಸಲು ರೇಷ್ಮೆ ಉತ್ಪಾದಕರ ಕಂಪನಿ ಸಹಕಾರಿಯಾಗಿದೆ ಎಂದು ತಿಳಿಸಿದರು.

ರೇಷ್ಮೆ ಸಹಾಯಕ ನಿರ್ದೇಶಕ ಸಿ.ಎಲ್. ಸತೀಶ್ ಮಾತನಾಡಿ, ರೇಷ್ಮೆ ಬೆಳೆಗಾರರ ಗುಂಪುಗಳಿಗೆ ರಾಷ್ಟ್ರೀಯ ವಿಕಾಸ ಯೋಜನೆಯಡಿ ಅನುದಾನ ದೊರೆಯುತ್ತಿದೆ ಅಂತರ್ಜಲ ಕುಸಿತದಿಂದ ಆದಾಯ ತಂದು ಕೊಡುವ ರೇಷ್ಮೆ ಕೃಷಿಯಲ್ಲಿ ಬೆಳೆಗಾರರು ಆಸಕ್ತಿಯನ್ನು ಕಳೆದುಕೊಳ್ಳತೊಡಗಿದ್ದರು. ಇಂಥ ಸಂದರ್ಭದಲ್ಲಿ ರೇಷ್ಮೆ ಇಲಾಖೆ ಹಾಗೂ ಸಂಪನ್ಮೂಲ ಸಂಸ್ಥೆ ರೈತರ ನೆರವಿಗೆ ಬಂದಿದೆ ಎಂದರು.

ಹೊಸಕೋಟೆ ಅಮೃತ ರೇಷ್ಮೆ ರೈತ ಉತ್ಪಾದಕರ ಕಂಪನಿ ಅಧ್ಯಕ್ಷ ಎನ್. ಚಂದ್ರಪ್ಪ ಮಾತನಾಡಿ, ಕೃಷಿ ಪರಿಕರ ಮತ್ತು ಸೇವೆಗಳನ್ನು ಪಡೆಯುವಲ್ಲಿ ಸುಧಾರಣೆ ತರುವುದು. ರೈತರ ಆದಾಯ ಹೆಚ್ಚಿಸಿ ಸುಸ್ಥಿರಗೊಳಿಸುವ ಉದ್ದೇಶದಿಂದ ಸಣ್ಣ, ಅತಿಸಣ್ಣ ರೈತರನ್ನು ಒಟ್ಟುಗೂಡಿಸಿ ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನ ಪರಿಚಯಿಸುವುದರಿಂದ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿದೆ ಎಂದರು.

ರೇಷ್ಮೆ ಕೃಷಿಯಲ್ಲಿ ಲಾಭ ಪಡೆಯಲು ಅನುಸರಿಸಬೇಕಾದ ವಿಧಾನಗಳ ಕುರಿತು ತಜ್ಞರು ಮಾಹಿತಿ ನೀಡಿ, ವಾರ್ಷಿಕ ವರದಿ ಮಂಡಿಸಿದರು. ಕೃಷಿ ರೇಷ್ಮೆ ಹಿತರಕ್ಷಣಾ ವೇದಿಕೆ ರಾಜ್ಯ ಸಂಚಾಲಕ ಮಳ್ಳೂರು ಶಿವಣ್ಣ, ಅನಿಕೇತನ ಸಂಸ್ಥೆ ಕಾರ್ಯದರ್ಶಿ ಚೇತನ್ ನಂದಿಬಟ್ಟಲು ಹಾಜರಿದ್ದರು.




Samyuktha Karnataka Pg.4b

# New guidelines promote Ayurveda, curb antibiotics use in veterinary treatment

**A.M. Jigeesh**
NEW DELHI

The Standard Veterinary Treatment Guidelines (SVTG), released recently by the Union Ministry of Animal Husbandry, aims to reduce and regulate the use of antibiotics to treat diseases found among livestock and poultry. The SVTG also provides for the use of Ayurvedic drugs in veterinary treatment.

It is for the first time that the Centre has come up with a standard set for treatment of almost all diseases of animals and birds.

Union Animal Husbandry Secretary Alka Upadhyay said the guidelines were designed to minimise antimicrobial resistance and effectively control diseases. Former Director and Vice-Chancellor of the Indian Veterinary Research Institute (IVRI) Raj Kumar Singh, who played a pivotal role in its drafting, said: "SVTG is for minimising the usage of drugs, including antibiotics. The guidelines will help in reducing the economic burden on farmers as medicines will be cost-effective from now."



Standard protocols for treatment of poultry and cattle have been set out.

Union Animal Husbandry Commissioner Abhijit Mitra said the guidelines were drafted by a team of more than 80 professionals from veterinary and medical fields. He said the States had been consulted in its preparation.

Dr. Singh said Ayurvedic drugs had been clinically proven for the treatment of some of the diseases by the National Dairy Development Board (NDDB). The document has prescribed the use of "ethnoveterinary medicine" and herbal drugs, tried on a large-scale by the NDDB to treat mastitis. "The validated ethnoveterinary medicine practices for treatment and better management of bovine mastitis are in use to reduce the irrational use of antibiotics, thereby reducing the cost of treatment," the SVTG says.

The Hindu Pg.16

Samyuktha Karnataka
Pg.08



ಈ ಬಾರಿ ಹತ್ತಿ ಇಳುವರಿ ಕುರಿತಂತೆ ಪರ ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿವೆ. ನಾಗಪುರದ ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ ಈ ಬಾರಿ ಉತ್ತಮ ಇಳುವರಿ ಬರಲಿದೆ ಎಂದು ಹೇಳಿದರೆ ಕಾಟನ್ ಅಸೋಸಿಯೇಶನ್ ಆಫ್ ಇಂಡಿಯಾ ಮೂಲಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಅತಿವೃಷ್ಟಿಯ ಬಾಧೆ ಹತ್ತಿ ಬೆಳೆಗೆ ತಗುಲಿವೆ ಎಂದು ಹೇಳಿವೆ.

# ಹತ್ತಿ ಇಳುವರಿ ಅಂತೆ ಕಂತೆಗಳ ಸಂತೆ

ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ಹತ್ತಿ ಇಳುವರಿ ಕಳೆದ ವರ್ಷದಂತೆಯೇ ಯಥಾಸ್ಥಿತಿ ಕಾಪಾಡಿಕೊಳ್ಳುವದೆಂದು ನಿರೀಕ್ಷಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬೆಳೆಕ್ಷೇತ್ರ ಕಡಿಮೆಯಾಗಿದ್ದರೂ ಸಕಾಲದಲ್ಲಿ ಸುರಿದ ಮಳೆ ಹಾಗೂ ಕೀಟ,ರೋಗಬಾಧೆ ಕಡಿಮೆ ಇದ್ದ ಕಾರಣ ಇಳುವರಿಗೆ ಧಕ್ಕೆಯಾಗುವ ಸಂಭವ ಕಡಿಮೆ ಎಂದು ಹೇಳಲಾಗಿದೆ.



ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಹತ್ತಿ ಬೆಳೆ ಕ್ಷೇತ್ರ 112.76 ಲಕ್ಷ ಹೆಕ್ಟೇರ್‌ದಷ್ಟಿದ್ದು, ಕಳೆದ ವರ್ಷದಲ್ಲಿದ್ದ 123.71 ಲಕ್ಷ ಹೆಕ್ಟೇರ್‌ಗೆ ಹೋಲಿಸಿದರೆ 11 ಲಕ್ಷ ಹೆಕ್ಟೇರ್‌ದಷ್ಟು ಕಡಿಮೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹತ್ತಿ ಬೆಳೆ ಪರಿಸ್ಥಿತಿ ಉತ್ತಮವಾಗಿದೆ. ಒಳ್ಳೆಯ ಇಳುವರಿಯೂ ಲಭಿಸಲಿದೆ. ಇದು ಕಳೆದ ವರ್ಷದಲ್ಲಿದ್ದ ಪ್ರಮಾಣದಲ್ಲೇ ಇರಲಿದೆ ಎಂದು ನಾಗಪುರದ ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ ತಿಳಿಸಿದೆ. 2023-24ನೇ ಸಾಲಿನಲ್ಲಿ ಹತ್ತಿ ಉತ್ಪಾದನೆ 325.22 ಲಕ್ಷ ಬೇಲ್ಸ್(1 ಬೇಲ್=170 ಕೆಜಿ)ದಷ್ಟಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯವು ತಿಳಿಸಿದೆ.

## ಮುಂಜಾಗ್ರತೆ ಅಗತ್ಯ

ಪ್ರಸಕ್ತ 2024ರಲ್ಲಿ ಹತ್ತಿ ಬೆಳೆ ಕ್ಷೇತ್ರ ಕರ್ನಾಟಕದಲ್ಲಿ 17 ಲಕ್ಷ ಹೆಕ್ಟೇರ್‌ದಷ್ಟಿದೆ. ಹಾವೇರಿ ಪ್ರಥಮ ಸ್ಥಾನದಲ್ಲಿದ್ದು, ಉಳಿದಂತೆ ಧಾರವಾಡ, ಮೈಸೂರು, ರಾಯಚೂರು ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದ ಹೆಕ್ಟೇರ್‌ನಲ್ಲಿ ಹತ್ತಿ ಬೆಳೆಯಲಾಗಿದೆ. ರಾಜ್ಯದಲ್ಲಿ ಕೆಲವೆಡೆ ಹತ್ತಿ ಬೆಳೆ ಪ್ರದೇಶಗಳಲ್ಲಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಉಂಟಾದ ಅತಿವೃಷ್ಟಿ ಹತ್ತಿ ಬೆಳೆ ಮೇಲೆ ಪರಿಣಾಮ ಬೀರಿದೆ ಎಂದು ಹೇಳಲಾಗಿದೆ. ಆದರೆ ನಿಖರವಾದ ಬೆಳೆ ಸಮೀಕ್ಷೆಯ ನಂತರವಷ್ಟೇ ಬೆಳೆ ಹಾನಿ ವಿವರ ತಿಳಿದುಬರಬೇಕಿದೆ.

ಕೀಟಬಾಧೆಗೆ ಸಂಬಂಧಿಸಿದಂತೆ ಈ ಬಾರಿ ಪಿಂಕ್ ಬೋಲ್‌ವರ್ಮ್ ಕೀಟಬಾಧೆ ಅಷ್ಟಾಗಿ ಕಂಡುಬರಲಿಲ್ಲ. ಮಳೆ ಇದ್ದ ಕಾರಣ ರಸ ಹೀರುವ ಕೀಟದ ಆಟವೂ ನಡೆಯಲಿಲ್ಲ. ರೈತರು ಈಗ ರಸ ಹೀರುವ ಕೀಟ ಬಾಧೆ ಸಹಿಸಿಕೊಳ್ಳುವ ಹೈಬ್ರಿಡ್ ತಳಿ ಹತ್ತಿ ಬೆಳೆಯುತ್ತಿದ್ದಾರೆ. ಆದರೆ ಪಿಂಕ್ ಬೋಲ್‌ವರ್ಮ್ ಕೀಟ ಈಗಲೂ ರೈತರ ಪಾಲಿನ ಸಿಂಹಸ್ವಪ್ನವಾಗಿವೆ. ರೈತರು ಸೂಕ್ತ ರೀತಿಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರೆ ಈ ಕೀಟಬಾಧೆಯನ್ನು ನಿಯಂತ್ರಿಸಬಹುದಾಗಿದೆ ಎಂದು ಐಸಿಎಆರ್‌ದ ಕೃಷಿ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

## ದಲ್ಲಾಳಿಯ ಅಂದಾಜು

ಈ ಬಾರಿ ಹತ್ತಿ ಬೆಳೆ ಇಳುವರಿ ಸುಮಾರು 361 ಲಕ್ಷ ಬೇಲ್ಸ್‌ದಷ್ಟು ಇರುವದೆಂದು ಗುಜರಾತಿನ ದಲ್ಲಾಳಿಯೊಬ್ಬರು ಅಂದಾಜಿಸಿದ್ದಾರೆ. ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕಗಳಲ್ಲಿ ಈ ಬಾರಿ ಅತಿವೃಷ್ಟಿಯ ನಡುವೆಯೂ ಹತ್ತಿ ಬೆಳೆ ಪರಿಸ್ಥಿತಿ ಉತ್ತಮವಾಗಿದೆ ಎಂದು ಅವರು ತಿಳಿಸಿದ್ದಾರೆ. ಆದರೆ ಈ ರಾಜ್ಯಗಳಲ್ಲಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಉಂಟಾದ ಅತಿವೃಷ್ಟಿಯಿಂದ ಹತ್ತಿ ಮೇಲೆ ಉಂಟಾದ ಪರಿಣಾಮ ಏನೆಂಬುದು ಇನ್ನು ಮೇಲೆ ತಿಳಿದುಬರಬೇಕಿದೆ. ಆದರೆ ಕಳೆದ ವಾರ ಕಾಟನ್ ಅಸೋಸಿಯೇಶನ್ ಆಫ್ ಇಂಡಿಯಾದ ಮೂಲಗಳು ಗುಜರಾತ್ ದಲ್ಲಾಳಿಯ ಅಂದಾಜಿನ ಬಗ್ಗೆ ಸಹಮತ ವ್ಯಕ್ತಪಡಿಸಿಲ್ಲ. 2024-25ನೇ ಹಂಗಾಮಿನ ಹತ್ತಿ ಇಳುವರಿ ಬಗ್ಗೆ ಈಗಲೇ ಏನನ್ನೂ ಅಂದಾಜಿಸಲಾಗದು. ಇತ್ತೀಚೆಗೆ ಬಿದ್ದ ಅತಿವೃಷ್ಟಿಯಿಂದ ಮಹಾರಾಷ್ಟ್ರ ಮತ್ತು ಗುಜರಾತ್‌ನ ಕೆಲವು ಪ್ರದೇಶಗಳಲ್ಲಿ ಹತ್ತಿ ಬೆಳೆ ಹಾನಿಯಾಗಿದೆ. ಜೊತೆಗೆ ಬೆಳೆ ಕೂಡ ಒಂದು ತಿಂಗಳಿನಷ್ಟು ತಡವಾಗಿದೆ ಎಂದು ತಿಳಿಸಿವೆ.

## ಹತ್ತಿ ಆಮದು

ಹಳೆ ದಾಸ್ತಾನು ಅತ್ಯಂತ ಕಡಿಮೆ ಇರುವ ಕಾರಣ 2024-25ನೇ ಸಾಲಿನಲ್ಲಿ ಹತ್ತಿ ಆಮದು ಹೆಚ್ಚಾಗುವ ಸಾಧ್ಯತೆ ಇದೆ. ಜಾಗತಿಕ ಮಾರುಕಟ್ಟೆಯಲ್ಲಿ ಹತ್ತಿ ಬೆಲೆ ಕಡಿಮೆ ಇರುವುದು ಕೂಡ ಇದಕ್ಕೆ ಅನುಕೂಲವಾಗಿದೆ. ಈ ವರ್ಷ ಆಮದು 35 ಲಕ್ಷ ಬೇಲ್ಸ್ ತಲುಪುವದೆಂದು ಹೇಳಲಾಗಿದೆ. ಸದ್ಯಕ್ಕೆ 30 ಲಕ್ಷ ಬೇಲ್ಸ್‌ದಷ್ಟು ದಾಸ್ತಾನು ಇದೆ. 2024-25ನೇ ಸಾಲಿನ ಹತ್ತಿ ಉತ್ಪಾದನೆ ಬಗ್ಗೆ ನಿಖರವಾದ ಅಂಕಿಅಂಶಗಳನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಅದು ಕಳೆದ ವರ್ಷದ ಮಟ್ಟದಲ್ಲೇ ಇರುವುದೆಂದು ಅಂದಾಜಿಸಲಾಗಿದ್ದರೂ ಅಂತಿಮವಾಗಿ ಏರುಪೇರಾಗುವ ಸಾಧ್ಯತೆಯೂ ಇದೆ. ಹೀಗಾಗಿ ಹತ್ತಿ ಆಮದು ಹೆಚ್ಚಾಗಲಿದೆ ಎಂದು ಹೇಳಲಾಗಿದೆ.

Vijayavani
Pg.3c

# ಹಾಪ್‌ಕಾಮ್ಸ್‌ನಲ್ಲಿ ಹಣ್ಣು ಮಾರಾಟ ಮೇಳ

» ನಾಳೆ ಆರಂಭ

» ನ.11 ರವರೆಗೆ ಆಯೋಜನೆ

**ಬೆಂಗಳೂರು:** ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಅ. 31ರಿಂದ ನ.11ರವರೆಗೆ ಇದೇ ಮೊದಲ ಬಾರಿ 'ಸೀತಾಫಲ, ಸೀಬೆ, ದಾಳಿಂಬೆ ಹಣ್ಣುಗಳ ಮಾರಾಟ ಮೇಳ' ಆಯೋಜಿಸಲಾಗಿದೆ. ಈ ಮೂರು ಹಣ್ಣುಗಳ ಸೀಸನ್ ಇದೀಗ ಆರಂಭವಾಗಿದ್ದು, ದೀಪಾವಳಿ ಹಬ್ಬ ಮತ್ತು ರಾಜ್ಯೋತ್ಸವ ಹಿನ್ನೆಲೆಯಲ್ಲಿ ಶೇ.10ರ ರಿಯಾಯಿತಿ ದರದಲ್ಲಿ ಹಣ್ಣುಗಳನ್ನು ಮಾರಾಟ ಮಾಡಲಾಗುವುದು ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ್ ಶಂಕರ ತಿಳಿಸಿದ್ದಾರೆ.

ಸಂಸ್ಥೆಯು ಬೆಳೆಗಾರರರನ್ನು ಪ್ರೋತ್ಸಾಹಿಸಲು ಮತ್ತು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಹಣ್ಣುಗಳ ಮಾರಾಟ ಮಾಡುವ ಸಂಬಂಧ ಮೇಳ ಆಯೋಜಿಸಲಾಗಿದೆ. ಮೇಳದಲ್ಲಿ ಸುಮಾರು 10 ಟನ್ ಗುಣಮಟ್ಟದ ದಾಳಿಂಬೆ ಹಣ್ಣು, 7 ಟನ್ ಸೀಬೆ ಹಾಗೂ 6 ಟನ್ ಸೀತಾಫಲ ಮಾರಾಟ ಮಾಡುವ ಗುರಿ ಹೊಂದಲಾಗಿದೆ. ನಗರದ ಎಲ್ಲ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ರಿಯಾಯಿತಿ ದರದಲ್ಲಿ ಹಣ್ಣುಗಳನ್ನು ಮಾರಾಟ ಮಾಡಲಾಗುವುದು ಎಂದು ಹೇಳಿದ್ದಾರೆ.